## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** M/s Gamesa Renewable Private Limited ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 90 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಹಂಚಿಕೆ ಆದೇಶ ನೀಡುವ ಬಗ್ಗೆ.

**ಓದಲಾಗಿದೆ:**
1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: 1429 –G
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ: 19.12.2016 ರ ಹಂಚಿಕೆ ಸಮಿತಿ ಸಭೆ ನಡವಳಿಗಳು.

* * *

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಏಕ ಕಡತ ಪದ್ಧತಿಯಡಿಯಲ್ಲಿ M/s Gamesa Renewable Private Limited ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳ ನೆಲ್ಲಿಕಟ್ಟೆ ದಿಬ್ಬದಹಟ್ಟಿ, ಬಿದರಕೆರೆ, ಗೊಲ್ಲರಹಟ್ಟಿ, ಅಜ್ಜಪ್ಪನಹಳ್ಳಿ, ಯಲಗೋಡು, ಗೊಲ್ಲರಹಳ್ಳಿ, ಬಸ್ತಿಹಳ್ಳಿ, ಹುಲ್ಲೆಹಾಳ್, ಅಡವಿಗೊಲ್ಲರಹಳ್ಳಿ, ಗುಟ್ಟಿದುರ್ಗ, ಕೆಚ್ಚೆರೆ, ಸಾವಲಗಟ್ಟ, ಕಕ್‌ಬಾಲು, ಹೊಸಹಟ್ಟಿ, ಹರಲಕಟ್ಟೆ, ಹಗ್ಗದಹಾಳು, ರಾಮರಹಳ್ಳಿ, ರಂಗವ್ವನಹಳ್ಳಿ ಮತ್ತು ಕಸವನಹಳ್ಳಿ ಗ್ರಾಮಗಳಲ್ಲಿ 90 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು 90 ಮೆ.ವ್ಯಾ ಸಾಮರ್ಥ್ಯಕ್ಕೆ ನಿಗದಿತ ಶುಲ್ಕವನ್ನು ಪಾವತಿಸಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಸದರಿ ಯೋಜನಾ ಸ್ಥಳವು ಈಗಾಗಲೇ M/s Faya Renewables and Power Projects Private Limited ರವರಿಗೆ ದಿನಾಂಕ : 10.11.2016 ರನ್ವಯ ತತ್ವಶಃ ಪತ್ರ ನೀಡಲು ಅನುಮೋದನೆಗೊಂಡಿರುವ 64.5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಿಂಪಡೆದು ಹಾಗೂ ಸದರಿ ಸ್ಥಳದ ಅಲ್ಪ ಭಾಗ M/s Chauhan Wind Energy ರವರಿಗೆ ಹಂಚಿಕೆಯಾಗಿರುವ 6.5 ಮೆ.ವ್ಯಾ ಯೋಜನಾ ಸ್ಥಳದಲ್ಲಿರುತ್ತದೆ. ಸದರಿಯವರಿಗೆ ಹಂಚಿಕೆಯಾಗಿ 7 ವರ್ಷವಾದರೂ ಯಾವುದೇ ಪ್ರಗತಿ ಸಾಧಿಸದ ಕಾರಣ ದಿನಾಂಕ : 15.06.2016 ರಂದು Show Cause Notice ನೀಡಿದ್ದು, ಆದರೆ ಇದುವರೆವಿಗೂ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ : ಇಎನ್ 172 ಎನ್‌ಸಿಇ 2017 ದಿನಾಂಕ : 05.05.2017 ರ ಆದೇಶದಲ್ಲಿ M/s Chauhan Wind Energy ಕಂಪನಿಗೆ ಮೈಸೂರು, ಚಿತ್ರದುರ್ಗ ಮತ್ತು ಗದಗ ಜಿಲ್ಲೆಗಳಲ್ಲಿ ಹಂಚಿಕೆಯಾಗಿರುವ 63 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದುಪಡಿಸಲಾಗಿರುತ್ತದೆ. M/s Gamesa Renewable Private Limited ಕಂಪನಿಯ ನೆಟ್‌ವರ್ತ್ ದಿನಾಂಕ: 31.03.2016 ರ ಅಂತ್ಯಕ್ಕೆ ರೂ.1881.81 ಕೋಟಿಗಳೆಂದು ಚಾರ್ಟೆಡ್ ಅಂಕೌಂಟೆಂಟ್‌ರವರು ದೃಢೀಕರಿಸಿರುವ ಪತ್ರ ಹಾಗೂ ಬ್ಯಾಲೆನ್ಸ್ ಶೀಟ್‌ಗಳನ್ನು ಕಂಪನಿಯು ಸಲ್ಲಿಸಿರುತ್ತದೆ. ಸದರಿ ಕಂಪನಿಯ Registrar of Companies, Ministry of Corporate Affairs, Government of India, Chennai ಇಲ್ಲಿ ದಿನಾಂಕ: 31.07.2015 ರಂದು CIN ಸಂಖ್ಯೆ U74991TN2006PTC079179 ರಲ್ಲಿ ನೋಂದಣಿಯಾಗಿರುತ್ತದೆ. M/s Gamesa Renewable Private Limited ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳ ಗ್ರಾಮಗಳಲ್ಲಿ 90 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಯೋಜನೆಗೆ ಸಂಬಂಧಿಸಿದ ತಾಂತ್ರಿಕ ವಿವರಗಳು, ಸ್ಥಳದ ಮಾಹಿತಿ, ಅಕ್ಷಾಂಶ ಮತ್ತು ರೇಖಾಂಶ ಇನ್ನಿತರೆ ವಿವರಗಳೊಂದಿಗೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿರುವಂತೆ ಹಂಚಿಕೆ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

...2)

Geographical area description for 90 MW capacity wind power project

| Sl. No | Topo sheet No | Proposed capacity in MW | Near by villages of the proposed area and district | Geographical area description of the project |
|---|---|---|---|---|
| 1 | 57 B /7 & 57 B/3 | **90 MW** (45 Nos x 2000 kw) | **Nellikatte, Dibbadahatti, Bidarekere, Gollarahatti, Ajjappanahalli, Yalagodu, Gollarahalli, Bastihalli, Hullehal Adavigollarahalli, Guttidurga, Kalgere, Kokbalu, Hosahatti, Haralakatte, Heggadehalu, Ramarahalli, Rangavvanahalli and Kasavanahalli Villages of Holalkere & Jagalur Taluks of Chitradurga & Davanagere Districts.** | The proposed area is a consists of two parts i.e. Part-A & Part-B which is fully covered by private land. Potential area is of high plains with an average elevation of about 700m. It is spread in North-South direction. Further, it is surrounded by Bidarekere Hullehal Nellikatte and Ajjappanahalli villages. And it is a non-forest area.<br><br>**Part-A**<br>The area is surrounded by points A, B, C, D and are held in the following Geographical co-ordinates as:<br>Point A: Lat: 14°21'34.56''N, Long: 76°15'0''E<br>Point B: Lat: 14°25'48.72''N, Long: 76°15'0''E<br>Point C: Lat: 14°25'42.96''N, Long: 76°17'56.40''E<br>Point D: Lat: 14°21'37.08''N, Long: 76°17'56.4''E<br>Peaks: 723, 690, 722, 707, 706, 688 and 687m AMSL.<br>**Part-B**<br>The area is surrounded by points A, B, C, D and are held in the following Geographical co-ordinates as:<br>Point A: Lat: 14°21'4.68''N, Long: 76°15'0''E<br>Point B: Lat: 14°21'10.44''N, Long: 76°11'56.04''E<br>Point C: Lat: 14°27'47.16''N, Long: 76°13'21.36''E<br>Point D: Lat: 14°27'46.08''N, Long: 76°15'0''E<br>Peaks: 710, 658, 668, 665, 724, 702 AND 630m AMSL. |
| | **Total** | **90 MW** | | |

ಮೇಲೆ ಓದಲಾದ ಕ್ರಮ ಸಂಖ್ಯೆ: (2) ದಿನಾಂಕ: 19.12.2016 ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ M/s Gamesa Renewable Private Limited ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳ ಗ್ರಾಮಗಳಲ್ಲಿ 90 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಘಟಕ ಸ್ಥಾಪಿಸುವ ಪ್ರಸ್ತಾವನೆಗೆ ಸಮಿತಿಯು ಸದರಿ ಕಂಪನಿಯವರು ಸ್ಥಾಪಿಸಲು ಉದ್ದೇಶಿಸಿರುವ ಸ್ಥಳವು ಖಾಸಗಿ ಜಮೀನಾಗಿದ್ದು, ಸದರಿ ಸ್ಥಳದಲ್ಲಿ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ 90 ಮೆ.ವ್ಯಾ ಸಾಮರ್ಥ್ಯಕ್ಕೆ ಹಂಚಿಕೆ ನೀಡಲು ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>**ಸರ್ಕಾರದ ಆದೇಶ ಸಂಖ್ಯೆ : ಇಎನ್ 365 ಎನ್‌ಸಿಇ 2016, ಬೆಂಗಳೂರು, ದಿನಾಂಕ: 18.01.2018**</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, M/s Gamesa Renewable Private Limited ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳ ನೆಲ್ಲಿಕಟ್ಟೆ ದಿಬ್ಬದಹಟ್ಟಿ, ಬಿದರಕೆರೆ, ಗೊಲ್ಲರಹಟ್ಟಿ, ಅಜ್ಜಪ್ಪನಹಳ್ಳಿ, ಯಲಗೋಡು, ಗೊಲ್ಲರಹಳ್ಳಿ, ಬಸ್ತಿಹಳ್ಳಿ, ಹುಲ್ಲೆಹಾಲ್, ಅಡವಿಗೊಲ್ಲರಹಳ್ಳಿ, ಗುಟ್ಟಿದುರ್ಗ, ಕಲ್ಗೆರೆ, ಸಾಪೆಲಗಟ್ಟ, ಕಕ್‌ಬಾಲು, ಹೊಸಹಟ್ಟಿ, ಹರಲಕಟ್ಟೆ, ಹೆಗ್ಗದೆಹಾಳು, ರಾಮರಹಳ್ಳಿ, ರಂಗವ್ವನಹಳ್ಳಿ ಮತ್ತು ಕಸವನಹಳ್ಳಿ ಗ್ರಾಮಗಳಲ್ಲಿ 90 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಹಂಚಿಕೆ ಮಾಡಿ ಆದೇಶಿಸಲಾಗಿದೆ.

Geographical area description for 90 MW capacity wind power project

| Sl. No | Topo sheet No | Proposed capacity in MW | Near by villages of the proposed area and district | Geographical area description of the project |
|---|---|---|---|---|
| 1 | 57 B /7 & 57 B/3 | 90 MW (45 Nos x 2000 kw) | **Nellikatte, Dibbadahatti, Bidarekere, Gollarahatti, Ajjappanahalli, Yalagodu, Gollarahalli, Bastihalli, Hullehal Adavigollarahalli, Gutidurga, Kalgere, Kokbalu, Hosahatti, Haralakatte, Heggadehalu, Ramarahalli, Rangavvanahalli and Kasavanahalli Villages of Holalkere & Jagalur Taluks of Chitradurga & Davanagere Districts.** | **The proposed area is a consists of two parts i.e. Part-A & Part-B which is fully covered by private land. Potential area is of high plains with an average elevation of about 700m. It is spread in North-South direction. Further, it is surrounded by Bidarekere Hullehal Nellikatte and Ajjappanahalli villages. And it is a non-forest area.**<br><br>**Part-A**<br>**The area is surrounded by points A, B, C, D and are held in the following Geographical co-ordinates as:**<br>**Point A: Lat: 14°21'34.56''N, Long: 76°15'0''E**<br>**Point B: Lat: 14°25'48.72''N, Long: 76°15'0''E**<br>**Point C: Lat: 14°25'42.96''N, Long: 76°17'56.40''E**<br>**Point D: Lat: 14°21'37.08''N, Long: 76°17'56.4''E**<br>**Peaks: 723, 690, 722, 707, 706, 688 and 687m AMSL.**<br><br>**Part-B**<br>**The area is surrounded by points A, B, C, D and are held in the following Geographical co-ordinates as:**<br>**Point A: Lat: 14°21'4.68''N, Long: 76°15'0''E**<br>**Point B: Lat: 14°21'10.44''N, Long: 76°11'56.04''E**<br>**Point C: Lat: 14°27'47.16''N, Long: 76°13'21.36''E**<br>**Point D: Lat: 14°27'46.08''N, Long: 76°15'0''E**<br><br>**Peaks: 710, 658, 668, 665, 724, 702 AND 630m AMSL.** |
| | **Total** | **90 MW** | | |

**ಷರತ್ತುಗಳು:-**

1. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರದ ಆದೇಶ ಸಂಖ್ಯೆ : ಇಎನ್ 435 ಎನ್‌ಸಿಇ 2011, ದಿನಾಂಕ :06.1.2012 ರನ್ವಯ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಅಭಿವೃದ್ಧಿದಾರರು ಈ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಇಎನ್ 354 ಎನ್‌ಸಿಇ 2008 ದಿನಾಂಕ: 19.01.2010 ಹಾಗೂ ತಿದ್ದುಪಡಿ ಆದೇಶ ಸಂಖ್ಯೆ: ಇಎನ್ 07 ಎನ್‌ಸಿಇ 2011, ದಿನಾಂಕ: 18.07.2011 ರಲ್ಲಿ ನಿಗದಿಪಡಿಯುವ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.
3. ಅಭಿವೃದ್ಧಿದಾರರು ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.
4. ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.
5. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ / ಕಂದಾಯ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು. ಅಭಿವೃದ್ಧಿದಾರರು ಈ ಯೋಜನೆಯನ್ನು ಖಾಸಗಿ ಜಮೀನಿನಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಖಾಸಗಿ ಜಮೀನಿನ ಮಾಲೀಕರಿಂದ ಒಪ್ಪಿಗೆ ಪತ್ರವನ್ನು ಪಡೆಯತಕ್ಕದ್ದು.

...4)

6. ಅಭಿವೃದ್ಧಿದಾರರು ಈ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್ತನ್ನು ಮಾರಾಟ ಮಾಡುವ ಕುರಿತು ಕೆ.ಪಿ.ಟಿ.ಸಿ.ಎಲ್ ನೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆಯನ್ನು ಮಾಡಿಕೊಳ್ಳಲು ಹಾಗೂ ಸ್ವಂತ ಬಳಕೆ ಮಾಡಿಕೊಳ್ಳಲು / ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಮತ್ತು ಕೆ.ಇ.ಆರ್.ಸಿ ರವರು ಅನುಮೋದಿಸಿ ಚಾಲ್ತಿಯಲ್ಲಿರುವ ದರದಲ್ಲಿ ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಸರ್ಕಾರದ ಆದೇಶ ಸಂಖ್ಯೆ : ಇಎನ್ 93 ವಿಎಸ್ಇ 2017 ದಿನಾಂಕ : 27.10.2017 ರಲ್ಲಿನ ಅಂಶಗಳನ್ನು ಅನುಸರಿಸುವ ಷರತ್ತುಗಳಿಗೊಳಪಟ್ಟು ವಿದ್ಯುತ್ ಖರೀದಿ ಒಡಂಬಡಿಕೆಯನ್ನು ಮಾಡಿಕೊಳ್ಳಲು ಅನುಮತಿಸಲಾಗಿದೆ.
7. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವುದು.
8. ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆಗೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.
9. ಸದರಿ ಕಂಪನಿಯವರು ಯೋಜನೆಗೆ ಸಂಬಂಧಿಸಿದಂತೆ ಬಾಕಿ ಇರುವ ಡಿಪಿಆರ್ ಮೊತ್ತ ಹಾಗೂ ಇನ್ನಿತರೆ ಶುಲ್ಕಗಳನ್ನು ಒಡಂಬಡಿಕೆ ಮಾಡಿಕೊಳ್ಳುವ ಮುನ್ನ ಕೆ.ಆರ್.ಇ.ಡಿ.ಎಲ್.ಗೆ ಸಂದಾಯ ಮಾಡತಕ್ಕದ್ದು.
10. ಕರ್ನಾಟಕ ಭೂಸುಧಾರಣ ಕಾಯ್ದೆ 1961 ಕಲಂ 109 ರಡಿ ಕಂದಾಯ ಇಲಾಖೆಯಿಂದ ಅನುಮತಿ ಪಡೆದುಕೊಂಡು ಭೂಪರಿವರ್ತನೆಯಾದ ನಂತರವೇ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳತಕ್ಕದ್ದು.
11. ಈ ಯೋಜನೆಗೆ ಸರ್ಕಾರದ ಕೈಗಾರಿಕ ನೀತಿ 2014–19 ರನ್ವಯ ಅನ್ವಯಿಸುವ ಸವಲತ್ತುಗಳು ಲಭ್ಯವಾಗುತ್ತವೆ.

ಸದರಿ ಆದೇಶವನ್ನು ರದ್ದುಪಡಿಸುವ / ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ.ಶ್ರೀನಿವಾಸಯ್ಯ),
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.
18/01/2018

**ಇವರಿಗೆ:**
ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಣೆಗಾಗಿ.

**ಪ್ರತಿ:**

1 ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) ರವರ ಕಾರ್ಯದರ್ಶಿ, ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು 560001.

2 ಪ್ರಧಾನ ಮಹಾಲೇಖಪಾಲರು (ಇ & ಎಸ್ ಎಸ್ ಎ) ರವರ ಕಾರ್ಯದರ್ಶಿ, ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001

3 ಪ್ರಧಾನ ಮಹಾಲೇಖಪಾಲರು (ಎ & ಇ) ರವರ ಕಾರ್ಯದರ್ಶಿ, ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು – 560001.0

4 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

5 ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

6 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.

7 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ,ಬೆಂಗಳೂರು–9.

8 ವ್ಯವಸ್ಥಾಪಕ ನಿರ್ದೇಶಕರು, ಹೆಸ್ಕಾಂ/ಬೆಸ್ಕಾಂ/ಸೆಸ್ಕಾಂ/ಜೆಸ್ಕಾಂ/ಮೆಸ್ಕಾಂ.

9 ಜಿಲ್ಲಾಧಿಕಾರಿಗಳು, ಚಿತ್ರದುರ್ಗ / ದಾವಣಗೆರೆ.
10 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು-1.
11 ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿತ್ರದುರ್ಗ / ದಾವಣಗೆರೆ
12 ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
13 **M/s Gamesa Renewable Private Limited (Formerly M/s Gamesa Wind Turbines Private Limited), The Futura, Block B, 8th Floor, No.334, Rajiv Gandhi Salai, Sholinganallur, Chennai – 600 119.**
14 **M/s Gamesa Renewable Private Limited, No.24, Saraogi Mansion, 2nd Cross, Nehru Nagar, Sheshadripuram, Bangalore- 560 020.**
15 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
16 ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
17 ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.